ಪಿಡಬ್ಲೂ -1(ಜಿ.ಪಿ.ಎ ಹೊಲ್ಡರ್ )

**ದಿಃ16.03.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಿ.ಡಬ್ಲೂ-1 ರವರ (ಜಿ.ಪಿ.ಎ. ಹೊಲ್ಡರ್) ರವರ ಪಾಟೀ ಸವಾಲು ಃ** ಶ್ರೀ. ಕೆ.ಎಮ್.ಬಿ. ನ್ಯಾಯವಾದಿಗಳಿಂದಃ-

ಸದರಿ ದಾವೆಯನ್ನು ಸಲ್ಲಿಸಲು ನಮ್ಮ ತಂದೆ ವಾದಿಯವರೇ ಮಾಹಿತಿಯನ್ನು ಕೊಟ್ಟಿರುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿ ಏನು ತಕರಾರು ಮತ್ತು ದಾಖಲೆಯನ್ನು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ದಾವ ಸ್ವತ್ತಿನ ಸಂಖ್ಯೆಃ54 ಮೂಲತಃ ಒಂದೇ ಇದ್ದು, ನಂತರ ನನ್ನ ತಂದೆ ಮತ್ತು ಅವರ ಸಹೋದರ ಹನುಮಂತಪ್ಪ ಅವರಿಗೆ ಸಮಾನವಾಗಿ ಹಿಸ್ಸೆಯಾದ ನಂತರ ದಾವ ಸ್ವತ್ತಿನ ಆಸ್ತಿ ಸಂಖ್ಯೆಃ54/1 ಮತ್ತು 54/2 ಎಂದು ಆಗಿರುತ್ತದೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಪಶ್ಚಿಮಕ್ಕೆ ಜುಗುಲು ಹನುಮಂತಪ್ಪ ಅವರಿಗೆ ಸೇರಿದ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಪಶ್ಚಿಮ ಭಾಗದಲ್ಲಿ ಗ್ರಾಮ ಠಾಣಾ ಜಾಗ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವ ಸ್ವತ್ತಿನ ಪಶ್ಚಿಮ ಭಾಗದಲ್ಲಿನ ನಿವೇಶನಕ್ಕೆ ಸಂಬಂದಿಸಿದಂತೆ ಓ.ಎಸ್.ನಂಃ65/2002 ರಂತೆ ಇದೇ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ನಮ್ಮ ತಂದೆ ಮೇಲೆ ಗುರುಪ್ಪ ಎಂಬುವವರು ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನ್ಯಾಯಾಲಯವು ಸದರಿ ಸ್ವತ್ತಿನ ದಾಖಲೆ ಸಾಕ್ಷಿಗಳನ್ನು ಪರಿಗಣಿಸಿ ತೀರ್ಪು ನೀಡಿರುತ್ತದೆ ಎಂದರೆ ಸರಿ. ಸದರಿ ಈ ಮೇಲೆ ಹೇಳಿದ ದಾವೆಯಲ್ಲಿ ನನ್ನ ತಂದೆ ನ್ಯಾಯಾಲಯದಲ್ಲಿ ನೀಡಿದ ಮೌಖಿಕ ಸಾಕ್ಷ್ಯವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವ ಸ್ವತ್ತು ಅನುಭವದ ಆದಾರದ ಮೇಲೆ ನಮ್ಮ ತಂದೆಯ ಹೆಸರಿಗೆ ಬಂದಿರುತ್ತದೆ. ದಾವ ಸ್ವತ್ತಿನ ಇ-ಸ್ವತ್‍ನ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೇಯೇ? ಎಂಬ ಪ್ರಶ್ನೆಗೆ ಸಾಕ್ಷಿಯು ಪಂಚಾಯಿತಿಯವರು ಇ-ಸ್ವತ್‍ನ್ನು ಕೊಡುತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂದಾಯದ ಜಮೀನು ಮತ್ತು ಗ್ರಾಮ ಠಾಣಾ ಸ್ವತ್ತುಗಳ ಬಗ್ಗೆ ಮತ್ತು ಗ್ರಾಮ ಠಾಣಾ ಸ್ವತ್ತಿನ ಖಾತೆದಾರರ ಬಗ್ಗೆ ಸರ್ವೆ ಮಾಡಿ ದಾಖಲೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸರ್ವೆಯಂತೆ ದಾವ ಸ್ವತ್ತಿನಲ್ಲಿನ ಮನೆ ಖಾತೆ ಸಂಖ್ಯೆಃ54 ಮಾತ್ರ ನಮಗೆ ಸೇರಿದ್ದಾಗಿರುತ್ತದೆ ಎಂದರೆ, ಸಾಕ್ಷಿಯು ಅದಕ್ಕೆ ಲಗತ್ತಾಗಿರುವ ಖಾಲಿ ನಿವೇಶನವು ಸಹ ನಮಗೆ ಸೇರಿದ್ದಾಗಿರುತ್ತದೆ ಎಂದು ಮುಂದುವರಿದು ನುಡಿಯುತ್ತಾರೆ. ದಾವ ಸ್ವತ್ತಿನ ಖಾತೆ ಸಂಖ್ಯೆಃ54/1 ಮತ್ತು 2

ನಮ್ಮ ತಂದೆಗೆ ಸೇರಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ಹೊರತುಪಡಿಸಿ ಸದರಿ ಗ್ರಾಮ ಠಾಣಾ ವ್ಯಾಪ್ತಿಯಲ್ಲಿರುವ ಬಹುತೇಕ ಎಲ್ಲಾ ಸ್ವತ್ತುಗಳನ್ನು ಇ-ಸ್ವತ್ ನ್ನು ಪಂಚಾಯಿತಿ ಅಧಿಕಾರಿಗಳು ಮಾಡಿರುತ್ತಾರೆ ಎಂದರೆ, ಸಾಕ್ಷಿಯು ಕೆಲವು ಸ್ವತ್ತುಗಳನ್ನು ಬಿಟ್ಟು ಉಳಿದ ಎಲ್ಲಾ ಸ್ವತ್ತುಗಳನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನ ಪಶ್ಚಿಮ ಭಾಗದಲ್ಲಿನ ನಿವೇಶನದ ನಂತರ ಗ್ರಾಮಕ್ಕೆ ಹೋಗುವ ಸರ್ಕಾರಿ ರಸ್ತೆ ಇರುತ್ತದೆ ಎಂದರೆ ಸರಿ. ದಾವ ಸ್ವತ್ತಿಗೆ ಸಂಬಂದಿಸಿದಂತೆ ಸದರಿ ದಾವೆ ಹಾಕುವ ಕಾಲಕ್ಕೆ ಅಸ್ತಿತ್ವದಲ್ಲಿರುವ ಇತ್ತೀಚಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಪಂಚಾಯಿತಿಯವರು ಅವುಗಳನ್ನು ಕೊಡುತ್ತಿಲ್ಲ ಎಂದು ನುಡಿಯುತ್ತಾರೆ.

ದಾವ ಸ್ವತ್ತಿನಲ್ಲಿ ನಮೂದಿಸಿರುವ ಆಸ್ತಿ ಸಂಖ್ಯೆಃ54 ರಲ್ಲಿ ಮನೆಯ ವಿಸ್ತೀರ್ಣ ಮಾತ್ರ ನಮ್ಮ ತಂದೆಯ ಹೆಸರಿಗೆ ಇದ್ದು, ಅದು ಮಾತ್ರ ಅಸ್ತಿತ್ವದಲ್ಲಿ ಇದ್ದು, ಉಳಿದ ಯಾವುದೇ ನಿವೇಶನ ನನ್ನ ತಂದೆಯ ಹೆಸರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿ ಅಧಿಕಾರಿಗಳು ಇತ್ತೀಚಿನ ದಾಖಲೆಗಳನ್ನು ಕೊಡುವುದಿಲ್ಲ ಎಂಬುದರ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವ ಸ್ವತ್ತಿನಲ್ಲಿನ ನಿವೇಶನ ನಮ್ಮ ತಂದೆಯ ಹೆಸರಿಗೆ ಪಂಚಾಯಿತಿ ದಾಖಲೆಗಳಲ್ಲಿ 2005 ರ ಹಿಂದೆ ನಮೂದು ಆಗಿದ್ದು, ನಂತರ ಸದರಿ ಹೆಸರನ್ನು ಕೈ ಬಿಟ್ಟಿರುತ್ತಾರೆ. ಸದರಿ ತಿದ್ದುಪಡಿಯ ಬಗ್ಗೆ ನಾನು ಸಂಬಂದಪಟ್ಟ ಅಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿದ್ದು, ಆದರೆ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಸದರಿ ತಿದ್ದುಪಡಿಯ ಸಂಬಂಧ ಸಂಬಂದಪಟ್ಟ ಪಂಚಾಯಿತಿ ಅಧಿಕಾರಿಗಳನ್ನು ಸಾಕ್ಷಿಗಳಾಗಿ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವ ಸ್ವತ್ತಿಗೆ ಸಂಬಂದಿಸಿದ ಕಂದಾಯದ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವ ಸ್ವತ್ತಿನಲ್ಲಿ ನಮೂದಿಸಿರುವ ನಿವೇಶನ ನಮ್ಮ ತಂದೆಯ ಹೆಸರಿಗೆ ಇರುವುದಿಲ್ಲ ಹಾಗೂ ಅದರಲ್ಲಿ ಯಾವುದೇ ಸ್ವಾಧೀನಾನುಭವವನ್ನು ಹೊಂದಿಲ್ಲದೇ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಪಿಡಬ್ಲ್ಯೂ -1(ಜಿ.ಪಿ.ಎ ಹೊಲ್ಡರ್ )

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು